# ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ರವರ ಕಾರ್ಯಲಯದ
## ಅಧಿಸೂಚನೆ

ಸಂಖ್ಯೆ/ಕೆಪಿಎ/ /2010-11 ದಿನಾಂಕ 16/6/2010.

ಮಾಹಿತಿ ಹಕ್ಕು ಅಧಿನಿಯಮ 2005ರ ( ಕೇಂದ್ರ ಕಾಯ್ದೆ 2005ರ ಸ.22) ಸೆಕ್ಷನ್ 4(1)(ಬಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಪೊಲೀಸ್ ಅಕಾಡೆಮಿಗೆ ಒಳಪಡುವ ವಿವರವಾದ ಮಾಹಿತಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಈ ಕೆಳಕಂಡಂತೆ ಪ್ರಕಟಗೊಳಿಸಲಾಗಿದೆ.

ಕರ್ನಾಟಕ ಪೊಲೀಸ್ ಅಕಾಡೆಮಿ ಕಾರ್ಯಾಲಯವು ಜಲಪುರಿ ಮೊಹಲ್ಲಾದ ಅಬ್ಬಾರಸ್ತೆಯಲ್ಲಿ ಸುಮಾರು 48 ಎಕರೆ ಪ್ರದೇಶವನ್ನು ಹೊಂದಿರುತ್ತದೆ.

ಅಕಾಡೆಮಿಯ ವ್ಯಾಪ್ತಿಯಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳು ಈ ಕೆಳಕಂಡ ರೀತಿಯಲ್ಲಿದೆ.

1. ನೇರ ನೇಮಕಾತಿಗೊಳ್ಳುವ ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ಉಪನಿರೀಕ್ಷಕರುಗಳು ಹಾಗು ಸಮಾನ ದರ್ಜೆಯ ಅಧಿಕಾರಿಗಳಿಗೆ ಒಂದು ವರ್ಷದ ಬುನಾದಿ ತರಬೇತಿ ನೀಡುವುದು
2. ಐಪಿಎಸ್ ಪ್ರಶಿಕ್ಷಣಾರ್ಥಿಗಳಿಗೆ 2 ವಾರಗಳ ತರಬೇತಿ ನೀಡುವುದು
3. ಸೇವಾನಿರತ ಅಧಿಕಾರಿಗಳಿಗೆ ಅಲ್ಪಾವಧಿ ಪುನಶ್ಚೇತನ ತರಬೇತಿಗಳನ್ನು ನಡೆಸುವುದು
4. ವಿವಿಧ ಸಾರಾಂಶಗಳ ಮೇಲೆ ನೇರ ಸಂವಾದ ಕೋರ್ಸ್‌ಗಳು-ಪೊಲೀಸ್ ಮನೋಭಾವ ಹಾಗು ನಡವಳಿಕೆ, ಕಾನೂನಿನ ಇತ್ತೀಚಿನ ತಿದ್ದುಪಡಿಗಳು ಹಾಗೂ ನ್ಯಾಯಾಲಯದ ಪ್ರಮುಖ ತೀರ್ಪುಗಳು, ಸಮಾಜದ ದುರ್ಬಲ ವರ್ಗದವರ ಹಿತರಕ್ಷಣೆ ಹಾಗೂ ಇನ್ನೂ ಅನೇಕ ವಿಷಯಗಳ ಬಗ್ಗೆ
5. ಹೊರದೇಶವಾದ ಮಾಲ್ಡೀವ್ಸ್ ಹಾಗೂ ಬೂತಾನ್ ದೇಶಗಳ ಪೊಲೀಸ್ ಅಧಿಕಾರಿಗಳಿಗೆ ಬುನಾದಿ ತರಬೇತಿ ನೀಡುವುದು.
6. ಅಬಕಾರಿ, ಸಾರಿಗೆ, ಅರಣ್ಯ, ಅಗ್ನಿ ಶಾಮಕ ದಳ, ಕಾರಾಗೃಹ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ನೀಡುವುದು. ಹಾಗೂ
7. ಆಡಳಿತ

## 1. ಈ ಘಟಕದ ಸಂಘಟನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು

ಕರ್ನಾಟಕ ಪೊಲೀಸ್ ಅಕಾಡೆಮಿಯ ಒಟ್ಟು ಮಂಜೂರಾತಿ ಬಲದ ವಿವರಗಳನ್ನು ಅನುಬಂಧ-1ರಲ್ಲಿ ಹಾಗು ಕೆಪಿಎ ಘಟಕದ ಅಧಿಕಾರಿ ಬಲದ ವಿವರಗಳ ಸಂಘಟನೆ ನಕಾಶೆಯನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ. ಮತ್ತು ಲಿಪಿಕ ಸಿಬ್ಬಂದಿಗಳ ಸಂಘಟನೆಯ ನಕಾಶೆಯನ್ನು ಅನುಬಂಧ-3 ರಲ್ಲಿ ತೋರಿಸಲಾಗಿದೆ.

ಈ ಘಟಕದಲ್ಲಿ ಐ.ಜಿ.ಪಿ ದರ್ಜೆಯ ಅಧಿಕಾರಿಯೊಬ್ಬರು ನಿರ್ದೇಶಕರಾಗಿಯೂ ಹಾಗೂ ಎಸ್.ಪಿ ದರ್ಜೆಯ ಅಧಿಕಾರಿಯೊಬ್ಬರು ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಪೊಲೀಸ್ ಅಕಾಡೆಮಿಗೆ ಒಟ್ಟು 124 ಅಧಿಕಾರಿ ಹಾಗು ಸಿಬ್ಬಂದಿಗಳು ಇದ್ದು ಅಕಾಡೆಮಿಗೆ ತರಬೇತಿಗಾಗಿ ಬರುವ ಪ್ರಶಿಕ್ಷಣಾರ್ಥಿಗಳ ತರಬೇತಿ ನೀಡುವುದು ಮತ್ತು ಆಡಳಿತ ವಿಭಾಗದಲ್ಲಿ ವೇತನ, ರಜೆ, ಸೇವಾ ಪುಸ್ತಕಗಳ ನಿರ್ವಹಣೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲಾಗುತ್ತಿರುತ್ತದೆ.

ಕರ್ನಾಟಕ ಪೊಲೀಸ್ ಅಕಾಡೆಮಿಯು ವಿಶಾಲವಾದ 50.78 ಎಕರೆ ಪ್ರದೇಶವನ್ನು ಹೊಂದಿರುತ್ತದೆ. ಅಕಾಡೆಮಿಯು ರಾಷ್ಟ್ರದಲ್ಲಿಯೇ ಪ್ರತಿಷ್ಠಿತ ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದ್ದು, ಸಬ್ ಇನ್ಸ್‌ಪೆಕ್ಟರ್ ಮಟ್ಟದಿಂದ ಮೇಲಿನ ವರ್ಗದ ರಾಜ್ಯ ಪೊಲೀಸ್ ಅಧಿಕಾರಿಗಳಿಗೆ ವಿಶೇಷ ತರಬೇತಿಗಳನ್ನು ನೀಡುವ ತರಬೇತಿ ಸಂಸ್ಥೆಯಾಗಿರುತ್ತದೆ. ಹಾಗು ಹೊರ ರಾಜ್ಯವಾದ ಮಾಲ್ಡೀವ್ಸ್ ಬೂತನ್ ಪೊಲೀಸ್ ಅಧಿಕಾರಿಗಳಿಗು ಸಹ ಬುನಾದಿ ತರಬೇತಿಯನ್ನು ನೀಡಲಾಗುತ್ತಿರುತ್ತದೆ.

1913 ರಲ್ಲಿ ಪ್ರಾರಂಭಗೊಂಡ ಪೊಲೀಸ್ ತರಬೇತಿ ಶಾಲೆಯು 1958 ರಲ್ಲಿ ಪೊಲೀಸ್ ತರಬೇತಿ ಕಾಲೇಜಾಗಿ ಉನ್ನತೀಕರಣಗೊಂಡಿತು. 1992 ರಲ್ಲಿ **ಕರ್ನಾಟಕ ಪೊಲೀಸ್ ಅಕಾಡೆಮಿ** ಎಂದು ಮರು ನಾಮಕರಣ ಮಾಡಲಾಯಿತು. 1958 ರಿಂದ ಇಲ್ಲಿಯವರೆಗೆ ಈ ತರಬೇತಿ ಸಂಸ್ಥೆಯಲ್ಲಿ 10.865 ಪೊಲೀಸ್ ಅಧಿಕಾರಿಗಳು ಮೂಲ ತರಬೇತಿ ಪಡೆದಿರುತ್ತಾರೆ.

ಈ ಅಕಾಡೆಮಿಯಲ್ಲಿ ನೇರ ನೇಮಕಾತಿ ಹೊಂದಿದ ಪೊಲೀಸ್ ಸಬ್–ಇನ್ಸ್‌ಪೆಕ್ಟರ್‌ಗಳು ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟ್ ಗಳು ತಮ್ಮ ಒಂದು ವರ್ಷದ ಬುನಾದಿ ತರಬೇತಿಯನ್ನು ಪಡೆದು, ಅನಂತರ ಪ್ರಾಯೋಗಿಕ ತರಬೇತಿಗೆ ತೆರಳುತ್ತಿರುತ್ತಾರೆ. ಕೇಂದ್ರದಿಂದ ರಾಜ್ಯಕ್ಕೆ ಹಂಚಲಾದ ಐ.ಪಿ.ಎಸ್ ಅಧಿಕಾರಿಗಳೂ ಸಹ ಈ ಅಕಾಡೆಮಿಯಲ್ಲಿ ಕಡ್ಡಾಯ ಅವಧಿಯ ನಾಲ್ಕು / ಎರಡು ವಾರಗಳ ತರಬೇತಿಯನ್ನು ನೀಡಲಾಗುತ್ತಿದೆ. ಇದರ ಜೊತೆಗೆ ಸೇವೆಯಲ್ಲಿರುವ ವಿವಿಧ ವರ್ಗದ ಪೊಲೀಸ್ ಅಧಿಕಾರಿಗಳಿಗೂ ಪುನಶ್ಚೇತನ ಹಾಗು ವಿಶೇಷ ತರಬೇತಿಗಳನ್ನು ಪ್ರತಿ ವರ್ಷವೂ ನಿರಂತರವಾಗಿ ನಡೆಸಲಾಗುತ್ತಿರುತ್ತದೆ.

ತರಬೇತಿಗಾಗಿ ಈ ಘಟಕದಲ್ಲಿ ದೃಶ್ಯ ಶ್ರವಣ ಸಾಧನಗಳನ್ನೊಳಗೊಂಡ ಆಧುನಿಕ ಬೋಧನಾ ಕೊಠಡಿಗಳು, ಅಪರಾಧ ದೃಶ್ಯ ಅನುಕರಣಾ ಪ್ರಯೋಗಾಲಯ, ವಿಧಿ ವಿಜ್ಞಾನ ವಸ್ತು ಸಂಗ್ರಹಾಲಯ, ವ್ಯಾಯಾಮ ಶಾಲೆ, ವಸತಿ ನಿಲಯಗಳು, ಅಧಿಕಾರಿಗಳ ಭೋಜನ ಶಾಲೆ ಗಣಕಯಂತ್ರದ ಕೊಠಡಿ, ಆಸ್ಪತ್ರೆ, ಸಭಾಂಗಣ, ಈಜುಕೊಳ, ಫೈರಿಂಗ್ ಸಿಮ್ಯುಲೇಟರ್ ಲ್ಯಾಬ್ ಹಾಗೂ ಇನ್ನು ಹತ್ತು ಹಲವಾರು ಸೌಕರ್ಯಗಳು ಕಲಿಕೆಗೆ ಹಾಗೂ ಉದ್ದೇಶಯುತ ಬಾಳ್ವೆಗೆ ಅನುಕೂಲಕರ ವಾತಾವರಣವನ್ನು ಒದಗಿಸುತ್ತದೆ.

ಅಕಾಡೆಮಿಯಲ್ಲಿ ಇಲಾಖೆಯಲ್ಲಿಯೇ ಉತ್ತಮವಾದ ಸುಸಜ್ಜಿತವಾದ ಗ್ರಂಥಾಲಯವಿದ್ದು ಸುಮಾರು 23,000ಕ್ಕೂ ಮಿಗಿಲಾದ ಪೊಲೀಸ್ ವಿಜ್ಞಾನಗಳ, ಕಾನೂನು ಹಾಗೂ ವಿವಿಧ ವಿಷಯಗಳ ಬಗ್ಗೆ ಪುಸ್ತಕಗಳನ್ನು, ಲಘು ಪ್ರಕಟಣೆಗಳು, ಜರ್ನಲ್‌ಗಳನ್ನು ಹೊಂದಿದೆ ಹಾಗು ಕಾನೂನಿಗೆ ಸಂಬಂಧಿಸಿದ ವಿಷಯಗಳ ಮೇಲೆ 200 ಕ್ಕೂ ಹೆಚ್ಚು ಸಿಡಿ/ಡಿವಿಡಿ ಗಳನ್ನು ಹೊಂದಿದೆ. ಅಲ್ಲದೆ ಕೆಪಿಎ ಯಲ್ಲಿ 19 ಸಿ.ಬಿ.ಟಿ ( ಕಂಪ್ಯೂಟರ್ ಬೇಸ್ಡ್ ಟುಟೋರಿಯಲ್ಸ್) ಅಂದರೆ ಕಂಪ್ಯೂಟರ್ ಆಧಾರಿತ ಪಾಠಗಳನ್ನು ಕನ್ನಡ ಹಾಗು ಇಂಗ್ಲೀಷ್ ಭಾಷೆಯಲ್ಲಿ ಅಭಿವೃದ್ದಿ ಪಡಿಸಿದೆ.

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಸುಜ್ಜಿತವಾದ ಅತಿಥಿ ಗೃಹಗಳು ಮತ್ತು ಉನ್ನತ ಪೊಲೀಸ್ ಅಧಿಕಾರಿಗಳ ವಸತಿ ನಿಲಯಗಳನ್ನು ಮತ್ತು ಪೊಲೀಸ್ ಅಧಿಕಾರಿಗಳ ಕಡೆಯವರಿಗೆ ಅತಿಥಿ ಗೃಹಗಳು ಸಹ ಇರುತ್ತದೆ.

## 2) ಅಧಿಕಾರಿ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು.

ಕರ್ನಾಟಕ ಪೊಲೀಸ್ ಅಕಾಡೆಮಿಯು ಗೃಹ ಇಲಾಖೆ ಹಾಗು ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ರವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಭಾರತ ಸರ್ಕಾರದಿಂದ ಹಾಗು ಕರ್ನಾಟಕ ಸರ್ಕಾರದ ಗೃಹ ಇಲಾಖೆಯಿಂದ ಹೊರಡಿಸಿರುವ ನೀತಿ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ.

ತರಬೇತಿಗಾಗಿ ಬರುವ ಪ್ರಶಿಕ್ಷಣಾರ್ಥಿಗಳಿಗೆ ಒಳಾಂಗಣ ಮತ್ತು ಹೊರಾಂಗಣ ತರಬೇತಿ ನೀಡುವುದು ಅಕಾಡೆಮಿಯ ಪ್ರಮುಖ ಉದ್ದೇಶವಾಗಿರುತ್ತದೆ.

**3) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗ ಒಳಗೊಂಡಂತೆ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯ ವಿಧಾನ**

ತರಬೇತಿ:

ಕರ್ನಾಟಕ ಪೊಲೀಸ್ ಅಕಾಡೆಮಿಗೆ ಬರುವ ಪ್ರಶಿಕ್ಷಣಾರ್ಥಿಗಳಿಗೆ ಈ ಕೆಳಗಿನಂತೆ ತರಬೇತಿ ನೀಡಲಾಗುತ್ತಿದೆ.

ಐ.ಪಿ.ಎಸ್ ಪ್ರಶಿಕ್ಷಣಾರ್ಥಿಗಳಿಗೆ 2 ವಾರಗಳ ತರಬೇತಿಯನ್ನು, ನೇರ ನೇಮಕಾತಿಗೊಳ್ಳುವ ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ಉಪನಿರೀಕ್ಷಕರುಗಳು ಹಾಗು ಸಮಾನ ದರ್ಜೆಯ ಅಧಿಕಾರಿಗಳಿಗೆ ಒಂದು ವರ್ಷದ ಬುನಾದಿ ತರಬೇತಿಯನ್ನು ಸೇವಾನಿರತ ಅಧಿಕಾರಿಗಳಿಗೆ ಅಲ್ಪಾವಧಿ ಪುನಶ್ಚೇತನ ತರಬೇತಿಗಳು ಮತ್ತು ವಿವಿಧ ವಿಷಯಗಳ ಮೇಲೆ ನೇರ ಸಂವಾದ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

**4) ಕಾರ್ಯಗಳ ನಿರ್ವಹಣೆಗೆ ಅಳವಡಿಸಿರುವ ಸೂತ್ರಗಳು**

ತರಬೇತಿಗಾಗಿ ಹಾಗು ಇತರೆ ತರಬೇತಿಗಾಗಿ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಲು ಹಾಗೂ ಪಡೆಯಲು ಸಭೆಗಳನ್ನು ನಡೆಸಲಾಗುತ್ತಿದೆ.

ಪ್ರಶಿಕ್ಷಣಾರ್ಥಿಗಳ ಮತ್ತು ಸಿಬ್ಬಂದಿಗಳ ಕುಂದುಕೊರತೆಗಳನ್ನು ಪೆಟ್ಟಿಗೆಯಲ್ಲಿ ಹಾಕುವ ಬಗ್ಗೆ ಹಾಗೂ ಪ್ರತಿ ಶನಿವಾರ ಉಪ ನಿರ್ದೇಶಕರು ಪೆಟ್ಟಿಗೆಯನ್ನು ತೆಗೆದು ಅದರಲ್ಲಿ ಮನವಿಗಳ ಮುಖಾಂತರ ಕುಂದುಕೊರತೆಗಳ ನಿವಾರಣೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ಸಿಬ್ಬಂದಿಗಳ ಕುಂದುಕೊರತೆ ಬಗ್ಗೆ ಪ್ರತಿ ಮಾಹೆ 29 ಮತ್ತು 30ನೇ ತಾರೀಖಿನಂದು ಸಿಬ್ಬಂದಿಗಳ ಕುಂದುಕೊರತೆಯನ್ನು ನಿವಾರಿಸಲು ಸಭೆ ನಡೆಸಲಾಗುತ್ತಿರುತ್ತದೆ.

**5) ಇಲಾಖೆಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ಬಳಸುತ್ತಿರುವ ಇಲಾಖೆಯಲ್ಲಿರುವ/ ಇಲಾಖೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.**

**ತರಬೇತಿಗೆ ಸಂಬಂಧಿಸಿದಂತೆ ಪ್ರಶಿಕ್ಷಣಾರ್ಥಿಗಳಿಗೆ ಒಳಾಂಗಣ ವಿಷಯವಾದ;**

1. ದಂಡ ಪ್ರಕ್ರಿಯಾ ಸಂಹಿತೆ
2. ಭಾರತ ದಂಡ ಸಂಹಿತೆ
3. ನ್ಯಾಯತತ್ವ, ಭಾರತದ ಸಂವಿಧಾನ ಮತ್ತು ಮಾನವ ಹಕ್ಕುಗಳು
4. ಪೊಲೀಸ್ ಆಡಳಿತ ಮತ್ತು ಸಂಘಟನೆ
5. ಆಧುನಿಕ ಭಾರತದಲ್ಲಿ ಪೊಲೀಸರ ಪಾತ್ರ.
6. ಭಾರತ ಸಾಕ್ಷ್ಯ ಅಧಿನಿಯಮ
7. ಅಪರಾಧ ಶಾಸ್ತ್ರ
8. ಸಂಚಾರ ನಿರ್ವಹಣೆ
9. ಪೊಲೀಸ್ ಮ್ಯಾನ್ಯುಯಲ್ ಭಾಗ 1,2,3
10. ಮನ:ಶಾಸ್ತ್ರ
11. ವಿಶೇಷ ಮತ್ತು ಸ್ಥಳೀಯ ಕಾಯ್ದೆಗಳು
12. ಫೊರೆನ್ಸಿಕ್ ಸೈನ್ಸ್ ( ಥಿಯರಿ)
13. ಫೊರೆನ್ಸಿಕ್ ಸೈನ್ಸ್ ( ಪ್ರಾಕ್ಟಿಕಲ್ )
14. ಮ್ಯಾಪ್ ರೀಡಿಂಗ್ ಮತ್ತು ಪ್ಲಾನ್ ಡ್ರಾಯಿಂಗ್
15. ನ್ಯಾಯ ವೈದ್ಯ ಶಾಸ್ತ್ರ
16. ಮಹಿಳಾ ಮತ್ತು ಮಕ್ಕಳ ಸಂಬಂಧಿ ಕಾನೂನು ಮತ್ತು ವಿಷಯಗಳು
17. ಗಣಕ ವಿಜ್ಞಾನ
18. ವೈರ್‌ಲೆಸ್
19. ಕ್ರೈಂ ಪ್ರಿವೆನ್ಸನ್ & ಡಿಟೆಕ್ಟಿವ್
20. ಪ್ರಥಮ ಚಿಕಿತ್ಸೆ

**ತರಬೇತಿಗೆ ಸಂಬಂಧಿಸಿದಂತೆ ಹೊರಾಂಗಣ ವಿಷಯವಾದ:**

1. ಕುದುರೆ ಸವಾರಿ
2. ಸ್ವಿಮೀಂಗ್
3. ಮೋಟಾರುವಾಹನ ಚಾಲನೆ
4. ರೈಫಲ್ ಶೂಟಿಂಗ್
5. ರಿವಾಲ್ವರ್ ಶೂಟಿಂಗ್
6. ವೆಪನ್ ಟ್ರೈನಿಂಗ್
7. ಅನ್-ಅರ್‌ಮ್ಡ್ ಕಾಂಬೆಟ್
8. ಫೀಷಿಕಲ್ ಟ್ರೈನಿಂಗ್
9. ಕ್ರೌಡ್ ಕಂಟ್ರೋಲ್
10. ಡ್ರಿಲ್ ಕಮಾಂಡ್ ಕಂಟ್ರೋಲ್
11. ಫೀಲ್ಡ್ ಕ್ರಾಫ್ಟ್

ಅಲ್ಲದೆ ಇತರೆ ತರಬೇತಿಗಾಗಿ ಮತ್ತು ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಸೂಚನೆಗಳು ಮತ್ತು ನಿಯಮಾವಳಿಗಳನ್ವಯ ಕಾರ್ಯ ನಿರ್ವಹಿಸುವುದು.

**ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ:**

1. ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡಾವಳಿಗಳು) ನಿಯಮಾವಳಿ 1965 ಹಾಗು ತಿದ್ದುಪಡಿ ನಿಯಮಗಳು 1989.
2. ಕರ್ನಾಟಕ ನಾಗರೀಕ ಸೇವಾ (ಪದೋನ್ನತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ 1978
3. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958.
4. ಕರ್ನಾಟಕ ನಾಗರೀಕ ಸೇವಾ ( ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957.
5. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು 1957.
6. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977.
7. ಕರ್ನಾಟಕ ನಾಗರೀಕ ಸೇವಾ (ಅರ್ಹತಾ ಪರೀಕ್ಷೆ) ನಿಯಮಗಳು 1977.
8. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966.
9. ಕರ್ನಾಟಕ ನಾಗರೀಕ ಸೇವಾ (ವೈದ್ಯೋಪಚಾರ) ನಿಯಮಗಳು 1963
10. ಕರ್ನಾಟಕ ಆರ್ಥಿಕ ಸಂಹಿತೆ
11. ಕರ್ನಾಟಕ ಖಜಾನೆ ನೀತಿ ಸಂಹಿತೆ
12. ಸಾದಿಲ್ವರು ವೆಚ್ಚಗಳ ಕೈಪಿಡಿ
13. ಕರ್ನಾಟಕ ರಾಜ್ಯ ಪೊಲೀಸ್ ( ಲಿಪಿಕ ಸೇವೆಗಳು ಸೇರಿದಂತೆ) ನೇಮಕಾತಿ ನಿಯಮಗಳು 2004
14. ಸರ್ಕಾರದ ಆದೇಶಗಳು, ಪೊಲೀಸ್ ಪ್ರಧಾನ ಕಛೇರಿಯಿಂದ ಹೊರಡಿಸುವ ಸುತ್ತೋಲೆಗಳು ಇತರೆ ಲಿಖಿತ ಪತ್ರಗಳು.
15. ಕರ್ನಾಟಕ ಪೊಲೀಸ್ ಕೈಪಿಡಿ

## 6) ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ಸ್ವಾಧೀನದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ

**ಆಡಳಿತ ವಿಭಾಗದಲ್ಲಿ**

1. ಪೊಲೀಸ್ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸೇವಾ ಪುಸ್ತಕಗಳು.
2. ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು.
3. ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆಗಳು.
4. ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳು.

**ಸಹಾಯಕ ನಿರ್ದೇಶಕರು(ಹೊರಾಂಗಣ) ವಿಭಾಗದಲ್ಲಿ**

1. ಸರ್ಕಾರಿ ಸ್ವತ್ತು ಪುಸ್ತಕ.
2. ಕರ್ತವ್ಯ ಸರದಿ ಪುಸ್ತಕ.
3. ಹಗಲು ಮತ್ತು ರಾತ್ರಿ ಗಸ್ತು ಪುಸ್ತಕ.
4. ಗಸ್ತು ಮಾಹಿತಿ ಪುಸ್ತಕ.
5. ಪಾಯಿಂಟ್ ಪುಸ್ತಕ.
6. ಪಿಸಿ ಮತ್ತು ಹೆಚ್‌ಸಿ ಗಳ ದೈನಂದಿನ ಕರ್ತವ್ಯ ನಿರ್ವಹಣಾ ಪುಸ್ತಕ.
7. ವ್ಯವಹರಣೆಗಳ ಪುಸ್ತಕ. (Process Register)
8. ಮುದ್ದೆ ಮಾಲು ಪುಸ್ತಕ (Property Register)
9. ಮೇಲಾಧಿಕಾರಿ ಭೇಟಿ ಪುಸ್ತಕ
10. ಪಹರೆ ಪುಸ್ತಕ. (Sentry Relief Book)
11. ಬಸ್ ವಾರೆಂಟ್ ಪುಸ್ತಕ
12. ಟಪಾಲು ಪುಸ್ತಕ
13. ಆಕಸ್ಮಿಕ ರಜೆಯ ವಹಿ
14. ಗಳಿಕೆ ರಜೆಯ ವಹಿ
15. ವರ್ಕ್ ಷೀಟ್
16. ವೈದ್ಯಕೀಯ ಚರಿತ್ರಾ ಪುಸ್ತಕ
17. ಅರ್ಜಿ ವಿಚಾರಣಾ ಪುಸ್ತಕ (Petition Register)
18. ಟೆಲಿಫೋನ್ ರಿಜಿಸ್ಟರ್

**7)ಕಾರ್ಯ ನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ ಜನ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು:**

ತರಬೇತಿ ಸಂಸ್ಥೆಯಾಗಿರುವುದರಿಂದ ಯಾವುದೇ ಕಾರ್ಯ ನೀತಿಯನ್ನು ರೂಪಿಸಲು ಸಾರ್ವಜನಿಕ ಸಮಿತಿಗಳನ್ನು ರಚಿಸಲಾಗಿರುವುದಿಲ್ಲ.

**8) ಸಲಹೆಯನ್ನು ಪಡೆಯುವ ಸಂಬಂಧದಲ್ಲಿ ಎರಡು ಅಥವಾ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಸಂಸ್ಥೆಗಳ ಪಟ್ಟಿ ಮತ್ತು ಇವುಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ? ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವುದೆ?**

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಮೇಲ್ಕಂಡ ಅಂಶಗಳು ಲಭ್ಯವಿರುವುದಿಲ್ಲ.

## 9) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ

| ಅಧಿಕಾರಿ ಹೆಸರು ಮತ್ತು ಪದನಾಮ | ಕಛೇರಿಯ ದೂರವಾಣಿ ಸಂಖ್ಯೆ |
|---|---|
| ಶ್ರೀ ಅಶಿತ್ ಮೋಹನ್ ಪ್ರಸಾದ್ ,ಐ.ಪಿ.ಎಸ್, ಐಜಿಪಿ ಮತ್ತು ನಿರ್ದೇಶಕರು | 2418627 / 2522057 / 9480800302 |
| ಶ್ರೀ ಕೆ.ಟಿ.ಬಾಲಕೃಷ್ಣ, ಉಪ ನಿರ್ದೇಶಕರು | 2418628 / 2564297 / 9480800332 |
| ಶ್ರೀ ಸತ್ಯನಾರಾಯಣ, ಉಪ ನಿರ್ದೇಶಕರು, ಪ್ರಾಸಿಕ್ಯೂಷನ್ | 2418630 |
| ಶ್ರೀ ಎಸ್.ಬಿ.ಮಾಸ್ತಮರ್ಡಿ, ಅಸಿಸ್ಟಂಟ್ ಡೈರೆಕ್ಟರ್ | 2418630 |
| ಶ್ರೀ ದುರ್ಗಯ್ಯ , ಅಸಿಸ್ಟಂಟ್ ಡೈರೆಕ್ಟರ್ | 2418630 |
| ಶ್ರೀ ವೆಂಕಟೇಶ್ ಕೆ.ಅರ್. ಅಸಿಸ್ಟಂಟ್ ಡೈರೆಕ್ಟರ್ | 2418734 |
| ಶ್ರೀ ಸಿ. ಉಪೇಂದ್ರ, ಅಸಿಸ್ಟಂಟ್ ಡೈರೆಕ್ಟರ್ | 2418631 |
| ಶ್ರೀ ಕೃಷ್ಣಮೂರ್ತಿ, ಅಸಿಸ್ಟಂಟ್ ಡೈರೆಕ್ಟರ್ | 2418732 |
| ಶ್ರೀ ಪುಟ್ಟಮಾದಪ್ಪ, ಅಸಿಸ್ಟಂಟ್ ಡೈರೆಕ್ಟರ್ | 2418629 |
| ಶ್ರೀ ಶಿವಕುಮಾರಯ್ಯ, ಅಸಿಸ್ಟಂಟ್ ಡೈರೆಕ್ಟರ್ | 2418633 |

## 10 ನಿಯಮ/ (ನಿಬಂಧನೆ) ಗಳಲ್ಲಿ ಉಪಬಂಧಿಸಿದಂತೆ, ಪರಿಹಾರ ಕ್ರಮವನ್ನು ಒಳಗೊಂಡಂತೆ, ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿರುವ ಸಂಭಾವನೆ ವಿವರಗಳು.

ಪ್ರಸ್ತುತ ಪ್ರಚಲಿತದಲ್ಲಿರುವ 2005ರ ಪರಿಷ್ಕೃತ ವೇತನ ಶ್ರೇಣಿಯ ನಿಯಮಗಳನ್ವಯ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲಾಗುತ್ತಿದೆ ತರಬೇತಿ ಸಂಸ್ಥೆಯಲ್ಲಿ ಬೋದಕ ವರ್ಗದವರಿಗೆ ವೇತನದಲ್ಲಿ 15% ವಿಶೇಷ ವೇತನವನ್ನು ಪಾವತಿಸಲಾಗುತ್ತಿದೆ. ಹಾಗು ಸರ್ಕಾರದ ಆದೇಶದಂತೆ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಸಂಭಾವನೆಯನ್ನು ಸಹ ನೀಡಲಾಗುತ್ತಿರುತ್ತದೆ.

## 11. ಯೋಜನೆಗಳ ವಿವರಗಳು ಪ್ರಾಸ್ತಾವಿಕ ವೆಚ್ಚಗಳು ಮತ್ತು ಬಟವಾಡಿ ಮಾಡಿದ ವರದಿಗಳನ್ನೊಳ ಗೊಂಡಂತೆ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಅಯವ್ಯಯ:

| ವಿವರ | 2008–09 | 2009–10 |
|---|---|---|
| ವೇತನ | 2,07,42,192 | 2,26,73,184 |
| ಇತರ ಲೆಕ್ಕಶೀರ್ಷಿಕೆಗಳು | 1,32,79,547 | 1,69,39,300 |
| ಆಧುನೀಕರಣ ಯೋಜನೆಗಳು (ಕಟ್ಟಡಗಳು) | 11,98,90,000 | 6,98,90,000 |
| ಆಧುನೀಕರಣ ಯೋಜನೆಗಳು ಪರಿಕರಗಳು ಮತ್ತು | 45,41,122 | 46,92,000 |

## 12. ಹಣ ಹಂಚಿಕೆ ಮಾಡಿದ ವಿವರಗಳನ್ನೊಳಗೊಂಡಂತೆ ಕಾರ್ಯಕ್ರಮಗಳ, ಫಲಾನುಭವಿಗಳ ವಿವರ ಹಾಗೂ ಸಹಾಯ ಧನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ.

ಈ ಘಟಕದಲ್ಲಿ ಪೊಲೀಸ್ ಕಲ್ಯಾಣ ನಿಧಿ ತೆರೆಯಲಾಗಿದೆ. ಈ ನಿಧಿಗೆ ಈ ಘಟಕದ ಅಧಿಕಾರಿ ಹಾಗೂ ಸಿಬ್ಬಂದಿಗಳಿಂದ ಮಾಸಿಕ ವಂತಿಕೆಯನ್ನು ಹಿಡಿದು ಈ ಖಾತೆಗೆ ಜಮಾ ಮಾಡಲಾಗುತ್ತಿದೆ. ಈ ಘಟಕದ ಅಧಿಕಾರಿ ಹಾಗೂ ಸಿಬ್ಬಂದಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಪಠ್ಯ ಪುಸ್ತಕ ಖರೀದಿಸಲು ವೈದ್ಯಕೀಯ ವೆಚ್ಚದಡಿಯಲ್ಲಿ ನೀಡಲಾಗದಂತಹ ವೈದ್ಯಕೀಯ ವೆಚ್ಚ ಇತ್ಯಾದಿ ವೆಚ್ಚಗಳನ್ನು ಪೊಲೀಸ್ ಕಲ್ಯಾಣ ನಿಧಿಯಿಂದ ಭರಿಸಲಾಗುತ್ತಿದೆ.

## 13. ರಿಯಾಯಿತಿಗಳು, ಅಪ್ಪಣೆ ಪತ್ರಗಳು ಅಥವಾ ಅಧಿಕಾರ ಪತ್ರಗಳನ್ನು ಪಡೆದವರ ವಿವರಗಳು

ಕರ್ನಾಟಕ ಪೊಲೀಸ್ ಅಕಾಡೆಮಿ ಘಟಕದಲ್ಲಿ ಯಾವುದೇ ರಿಯಾಯಿತಿ, ಅಪ್ಪಣೆ ಪತ್ರ ಅಥವಾ ಅಧಿಕಾರ ಪತ್ರವನ್ನು ಮಂಜೂರು ಮಾಡಿರುವುದಿಲ್ಲ.

## 14. ಈ ಘಟಕದಲ್ಲಿ ದೊರೆಯುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರಗಳು

ಕರ್ನಾಟಕ ಪೊಲೀಸ್ ಅಕಾಡೆಮಿಯನ್ನು ವಿದ್ಯುನ್ಮಾನ ರೂಪಕ್ಕೆ ತಂದಿದ್ದು, ಈ ಕೆಳಕಂಡ ವೆಬ್‌ಸೈಟ್ ವಿಳಾಸದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

www. Karnatakapoliceacademy.org

## 15 ಗ್ರಂಥಾಲಯವನ್ನು ಸಾರ್ವಜನಿಕರ ಬಳಕೆಗೆ ನಿರ್ವಹಿಸಿದ್ದಲ್ಲಿ, ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲಿರುವ ಅನುಕೂಲತೆಗಳು

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಪ್ರಶಿಕ್ಷಣಾರ್ಥಿಗಳಿಗಾಗಿ ಗ್ರಂಥಾಲಯವನ್ನು ನಿರ್ವಹಿಸಲಾಗಿದೆ.

## 16 ಸಾರ್ವಜನಿಕ ಸಂಪರ್ಕಾಧಿಕಾರಿಗಳ ಹೆಸರು, ಪದನಾಮ ಮತ್ತು ವಿಳಾಸ

| ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ |
|---|---|---|
| **ಶ್ರೀ ಕೆ.ಟಿ.ಬಾಲಕೃಷ್ಣ ,<br>ಉಪ ನಿರ್ದೇಶಕರು,<br>ಕರ್ನಾಟಕ ಪೊಲೀಸ್ ಅಕಾಡೆಮಿ,<br>ಮೈಸೂರು.<br>ದೂರವಾಣಿ ಸಂ :<br>2418628/2564297** | **ಶ್ರೀಮತಿ ಹೆಚ್.ಎನ್.ಅನ್ನಪೂರ್ಣ<br>ಸಹಾಯಕ ಆಡಳಿತಾಧಿಕಾರಿ,<br>ಕರ್ನಾಟಕ ಪೊಲೀಸ್ ಅಕಾಡೆಮಿ,<br>ಮೈಸೂರು.<br>ದೂರವಾಣಿ ಸಂ: 2418636** | **ಶ್ರೀ ಎ.ಎಂ.ಪ್ರಸಾದ್, ಐ.ಪಿ.ಎಸ್,<br>ಐ.ಜಿ.ಪಿ, ಮತ್ತು ನಿರ್ದೇಶಕರು,<br>ಕರ್ನಾಟಕ ಪೊಲೀಸ್ ಅಕಾಡೆಮಿ,<br>ಮೈಸೂರು.<br>ದೂರವಾಣಿ ಸಂ 2418627 /<br>2522057** |

## 17 ಹೆಚ್ಚುವರಿ ಮಾಹಿತಿಗಳು

**ಆಡಳಿತ ಕಛೇರಿ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು : ಪೋನ್ ನಂ 2418636:**

ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ಸಹಾಯಕ ಆಡಳಿತಾಧಿಕಾರಿ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ರವರನ್ನು ಖುದ್ದಾಗಿ ಅಥವಾ ಪೋನ್ ಮುಖಾಂತರ ಸಂಪರ್ಕಿಸಬಹುದು

(ಎ.ಎಂ. ಪ್ರಸಾದ್, ಐಪಿಎಸ್)
ಐಜಿಪಿ & ನಿರ್ದೇಶಕರು,
ಕರ್ನಾಟಕ ಪೊಲೀಸ್ ಅಕಾಡೆಮಿ,
ಮೈಸೂರು.

# ಮಾಹಿತಿ ಹಕ್ಕು ಅಧಿನಿಯಮ– 2005
# ಕರ್ನಾಟಕ ಪೊಲೀಸ್ ಅಕಾಡೆಮಿಯ ಮೈಸೂರು
# ಅನುಬಂಧ–1

| ಕ್ರ.ಸಂ | ಹುದ್ದೆಗಳ ವಿವರ | ಮಂಜೂರಾತಿ ಬಲ |
|---|---|---|
| 1 | ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ವಿಶೇಷ ಅಧಿಕಾರಿ) | 1 |
| 2 | ನಿರ್ದೇಶಕರು | 1 |
| 3 | ಉಪ ನಿರ್ದೇಶಕರು | 1 |
| 4 | ಸಹಾಯಕ ನಿರ್ದೇಶಕರು (ಸಿವಿಲ್) | 5 |
| 5 | ಸಹಾಯಕ ನಿರ್ದೇಶಕರು (ಎಫ್‌ಪಿಬಿ) | 1 |
| 6 | ರೀಡರ್ | 1 |
| 7 | ರೀಡರ್ ಇನ್ ಫೋರೆನ್ಸಿಕ್ ಸೈನ್ಸ್ | 1 |
| 8 | ಡೆಪ್ಯೂಟಿ ಡೈರೆಕ್ಟರ್ ಅಫ್ ಪ್ರಾಸಿಕ್ಯೂಷನ್ | 2 |
| 9 | ಸಿವಿಲ್ ಹೆಡ್‌ಕಾನ್ಸ್‌ಟೇಬಲ್ | 1 |
| **ಸಶಸ್ತ್ರ :–** | | |
| 1 | ಸಹಾಯಕ ನಿರ್ದೇಶಕರು (ಹೊರಾಂಗಣ) | 1 |
| 2 | ರಿಸರ್ವ್ ಸಬ್ ಇನ್ಸ್‌ಪೆಕ್ಟರ್ | 4 |
| 3 | ಹೆಡ್ ಕಾನ್ಸ್‌ಟೇಬಲ್ | 20 |
| 4 | ಪೊಲೀಸ್ ಕಾನ್ಸ್‌ಟೇಬಲ್ | 20 |
| **ಲಿಪಿಕ ವರ್ಗ :–** | | |
| 1 | ಸಹಾಯಕ ಆಡಳಿತಾಧಿಕಾರಿ | 1 |
| 2 | ಶಾಖಾಧೀಕ್ಷಕರು | 1 |
| 3 | ಶೀಘ್ರಲಿಪಿಗಾರರು | 2 |
| 4 | ಪ್ರಥಮ ದರ್ಜೆ ಸಹಾಯಕರು | 3 |
| 5 | ದ್ವಿತೀಯ ದರ್ಜೆ ಸಹಾಯಕರು | 5 |
| 6 | ಬೆರಳಚ್ಚುಗಾರರು | 2 |
| **ಇತರ ಸಿಬ್ಬಂದಿ :–** | | |
| 1 | ಲ್ಯಾಬ್ ಅಸಿಸ್ಟೆಂಟ್ | 1 |
| 2 | ಎಲೆಕ್ಟ್ರೀಶಿಯನ್ | 1 |
| **ಅನುಯಾಯಿಗಳು :–** | | |
| 1 | ಡ್ರೈ ಸ್ವೀಪರ್ | 17 |
| 2 | ವೆಟ್ ಸ್ವೀಪರ್ | 11 |
| 3 | ಜವಾನ | 14 |
| 4 | ಬಾರ್‌ಬರ್ | 2 |
| 5 | ಅಡಿಗೆಯವರು | 3 |
| **ಆಸ್ಪತ್ರೆ ಸಿಬ್ಬಂದಿ :–** | | |
| 1 | ವೈದ್ಯಾಧಿಕಾರಿ | 1 |
| 2 | ಫಾರ್ಮಾಸಿಸ್ಟ್ | 1 |
| | **ಒಟ್ಟು** | **124** |

# ಕರ್ನಾಟಕ ಪೊಲೀಸ್ ಅಕಾಡೆಮಿಯ ಮೈಸೂರು
## ಅಧಿಕಾರಿ ಯವರ ಸಂಘಟನೆಯ ನಕಾಶೆ ಅನುಬಂಧ–2

**ಅಡಿಷನಲ್ ಡೈರೆಕ್ಟರ್ ಜನರಲ್**
**ಆಫ್ ಪೊಲೀಸ್ (ವಿಶೇಷ ಅಧಿಕಾರಿ)**

↓

**ನಿರ್ದೇಶಕರು**

↓

**ಉಪ ನಿರ್ದೇಶಕರು**

- ನಿರ್ದೇಶಕರು<br>ಸಹಾಯಕ ನಿರ್ದೇಶಕರು<br>(ಸಿವಿಲ್– 5)
- ಸಹಾಯಕ ನಿರ್ದೇಶಕರು<br>(ಹೊರಾಂಗಣ–1)
- ಡೆಪ್ಯೂಟಿ ಡೈರೆಕ್ಟರ್<br>ಅಫ್ ಪ್ರಾಸಿಕ್ಯೂಷನ್–1
- ಸಹಾಯಕ<br>ನಿರ್ದೇಶಕರು(ಎಫ್‌ಪಿಬಿ)

↓

ರಿಸರ್ವ್ ಸಬ್ ಇನ್ಸ್‌ಪೆಕ್ಟರ್ (3)

↓

ಹೆಡ್ ಕಾನ್ಸ್‌ಟೇಬಲ್ (20)

↓

ಪೊಲೀಸ್ ಕಾನ್ಸ್‌ಟೇಬಲ್ (20)

## ಕರ್ನಾಟಕ ಪೋಲೀಸ್ ಅಕಾಡೆಮಿಯ ಮೈಸೂರು
## ಲಿಪಿಕ ಸಿಬ್ಬಂದಿಗಳ ಸಂಘಟನೆಯ ನಕಾಶೆ ಅನುಬಂಧ-3

**ಸಹಾಯಕ ಆಡಳಿತಾಧಿಕಾರಿ**

↓

**ಶಾಖಾಧೀಕ್ಷಕರು(1)**

↓

**ಶೀಘ್ರಲಿಪಿಗಾರರು(2)**

↓

**ಪ್ರಥಮ ದರ್ಜೆ ಸಹಾಯಕರು(3)**

↓

**ದ್ವಿತೀಯ ದರ್ಜೆ ಸಹಾಯಕರು(5)**

↓

**ಬೆರಳಚ್ಚುಗಾರರು(2)**

ಟಿಪ್ಪಣಿ:-

1. ಸಾರ್ವಜನಿಕರು ಸಲ್ಲಿಸುವ ಮಾಹಿತಿ ಹಕ್ಕು ಅಧಿನಿಯಮದ ಎಲ್ಲಾ ಅರ್ಜಿಗಳನ್ನು ಈ ಕಛೇರಿಯ ಒಳಬಂದ ಶಾಖೆಯಲ್ಲಿ ಸ್ವೀಕರಿಸಲಾಗುತ್ತಿದೆ( ಅರ್ಜಿಯನ್ನು ಸಲ್ಲಿಸಿದಾಗ ಸ್ವೀಕೃತಿ ಪಡೆಯುವುದು)
2. ಸಾರ್ವಜನಿಕರಿಗೆ ಮಾಹಿತಿ ಹಕ್ಕು ಅಧಿನಿಯಮದಡಿ ಹೆಚ್ಚಿನ ಮಾಹಿತಿ ಪಡೆಯಬೇಕಾಗಿದ್ದಲ್ಲಿ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯವರನ್ನು ಸಂಪರ್ಕಿಸಲು ತಿಳಿಸಲಾಗಿದೆ.
3. ಸಾರ್ವಜನಿಕರು ಮಾಹಿತಿ ಪಡೆಯಲು ಬಯಸಿ ಅರ್ಜಿ ಸಲ್ಲಿಸುವಾಗ ಸ್ಪಷ್ಟವಾಗಿ ವಿಳಾಸವನ್ನು ಬರೆಯುವುದರ ಜೊತೆ ದೂರವಾಣಿ ಸಂಪರ್ಕವಿದ್ದಲ್ಲಿ ಅರ್ಜಿಯಲ್ಲಿ ನಮೂದಿಸಲು ತಿಳಿಸಲಾಗಿದೆ.